ಸೆಲೆಬ್ರಿಟಿ
■ ಹನಿ


# ಆರ್‌ಜಿವಿ ಭೂಗತ?



ಆರ್‌ಜಿವಿ ಎಂದರೆ ವಿಕ್ಷಿಪ್ತ ವ್ಯಕ್ತಿ ಎನ್ನುವುದು ಹಳೇ ಸತ್ಯ. ಈಗಿನ ಹೊಸ ಸತ್ಯ ಏನೆಂದರೆ, ಈ ವಿಕ್ಷಿಪ್ತ ವ್ಯಕ್ತಿತ್ವದಿಂದಾಗಿ ರಾಮ್‌ಗೋಪಾಲ್ ವರ್ಮಾ, ಬಾಲಿವುಡ್‌ನಿಂದಲೇ ಬಹಿಷ್ಕಾರಕ್ಕೆ ಒಳಗಾಗುವ ಭಯದಲ್ಲಿರುವುದು! ಊರೆಲ್ಲಾ ಸಾಲ ಮಾಡಿರುವ ಆರ್‌ಜಿವಿ ಸದ್ಯಕ್ಕೆ ಯಾರ ಫೋನಿಗೂ ಸಿಗುತ್ತಿಲ್ಲ ಎನ್ನುವುದೊಂದು ಸುದ್ದಿ ಹಬ್ಬಿದೆ. ತನ್ನ ಅಂಧೇರಿ ಕಚೇರಿಗೂ ಈತ ಬರುತ್ತಿಲ್ಲವಂತೆ. ಫೋನ್ ಮಾಡಿದರೆ ಎತ್ತಲ್ಲವಂತೆ! ಭರತ್ ಶಾಗೆ 9 ಕೋಟಿ ಕೊಡಬೇಕಂತೆ; ರಿಲಯನ್ಸ್ ಕಂಪೆನಿಗೆ 32 ಕೋಟಿ ಕೊಡಬೇಕಂತೆ. ರಿಲಯನ್ಸ್‌ನವರು ಕೋರ್ಟಿಗೆ ಹೋಗಿ ಪ್ರತಿ ಸಿನಿಮಾದಲ್ಲೂ ಇಷ್ಟು ಪಾಲು ಸಾಲಕ್ಕೆ ಸಂದಾಯವಾಗಬೇಕೆಂದು ಆರ್ಡರ್ ತಂದರೂ, ಕಾಲು ಭಾಗದಷ್ಟು ಹಣವೂ ವಸೂಲಾಗಿಲ್ಲ ಎನ್ನುವುದು ಹಾಟ್ ಸುದ್ದಿ. ಈ ಸುದ್ದಿಗಳು ಎಷ್ಟರ ಮಟ್ಟಿಗೆ ಸತ್ಯ ಎಂದು ತಿಳಿದುಕೊಳ್ಳಲು ಫೋನ್ ಮಾಡಿದ ಪತ್ರಕರ್ತರಿಗೆ, 'ಏನಾರ ಬರ್ಕೊಳ್ರಿ, ನನ್ನ ತಲೆ ತಿನ್ನಬೇಡಿ' ಎಂದು ಫೋನ್ ಕುಕ್ಕಿದರಂತೆ ಆರ್‌ಜಿವಿ!

ರಾಮ್‌ಗೋಪಾಲ್ ವರ್ಮಾ ಬಾಲಿವುಡ್‌ನ ಮೊದಲ ಸಾಲಿನ ಪ್ರತಿಭಾವಂತ ಎನ್ನುವುದರಲ್ಲಿ ಎರಡು ಮಾತಿಲ್ಲ. ಆತನಷ್ಟು ಕುತೂಹಲಕಾರಿಯಾಗಿ ಚಿತ್ರಕಥೆ ಹೆಣೆಯುವವರು ಕಡಿಮೆಯೇ. ಅದರಲ್ಲೂ ಕ್ರೈಮ್ ಮತ್ತು ಸೈಕಾಲಜಿಯನ್ನು ಈತನನ್ನು ಎದೆ ನಡುಗಿಸುವಂತೆ 'ಮಿಕ್ಸ್' ಮಾಡುವವರಿಲ್ಲ. ಮುಂಬೈಯ ಭೂಗತ ಜಗತ್ತು ಮತ್ತು ಸಿನಿಮಾ ಡಿಪಾರ್ಟ್‌ಮೆಂಟನ್ನು ಇಂಚಿಂಚಾಗಿ ಅಧ್ಯಯನ ಮಾಡಿರುವ ಆರ್‌ಜಿವಿ, ಈ ವಿಷಯಗಳ ಬಗ್ಗೆ ಇನ್ನೂ 20 ಸಿನಿಮಾಗಳನ್ನು ಮಾಡಿ ಒಗೆಯಬಹುದು. ಇತ್ತೀಚೆಗೆ ಭೂತ ಹೊಕ್ಕವರಂತೆ ಭೂತದ ಕಥೆಗಳನ್ನೇ ಮಾಡಿ ಈತ ನಿರ್ಮಾಪಕನಾಗಿ ಎಕ್ಕುಟ್ಟಿ ಹೋದದ್ದೂ ಸುಳ್ಳಲ್ಲ. ಆದರೆ ಮೆಚ್ಚಬೇಕಾದ ಅಂಶವೆಂದರೆ, ಆರ್‌ಜಿವಿ ಸ್ವಂತ (ಅಥವಾ ಸಾಲ ತಂದ) ಹಣದಲ್ಲೇ ಈ ಪ್ರಯೋಗಗಳನ್ನು ಮಾಡುತ್ತಿರುವುದು. ಬಾಲಿವುಡ್‌ನಲ್ಲಿ ಸಾಕಷ್ಟು ಅದ್ಭುತ ಕಮರ್ಷಿಯಲ್ ಸಿನಿಮಾ ನಿರ್ದೇಶಕರು ಬಂದು ಹೋದರೂ, 'ಟ್ರೆಂಡ್ ಸೆಟ್ಟರ್'ಗಳಾದ ಸತ್ಯಾ, ರಂಗೀಲಾ, ಕಂಪೆನಿ ಮುಂತಾದ ಸಿನಿಮಾಗಳನ್ನು ಮಾಡಲು ಆರ್‌ಜಿವಿ ಯೇ ಬರಬೇಕಾಯಿತು. ಇವತ್ತಿಗೂ ಕ್ಷಣ ಕ್ಷಣಂ, ರಣ್, ಶೂಲ್ ಮುಂತಾದ ಸಿನಿಮಾಗಳ ಮೂಲಕ ಮೇರುಪ್ರತಿಭೆಯಾಗಿ ಉಳಿದಾತ ಈ ಆರ್‌ಜಿವಿ.

ವಿವಾದಗಳೇನೂ ಈತನಿಗೆ ಹೊಸತಲ್ಲ. ಬೇರೆಯವರೆಲ್ಲ ಪ್ರಚಾರಕ್ಕಾಗಿ, ಅಸ್ತಿತ್ವದ ಉಳಿವಿಗಾಗಿ ವಿವಾದಗಳನ್ನು ಹುಟ್ಟು ಹಾಕಿದರೆ, ಈತ ಸುಮ್ಮನೆ ಕುಳಿತಿರಲಾಗದೆ ವಿವಾದದ ಇರುವೆಗಳನ್ನು ಬಿಟ್ಟುಕೊಳ್ಳುತ್ತಿದ್ದಾರೆ! ಇಲ್ಲವಾದಲ್ಲಿ, ಚೌತಿಗೆ ಮುನ್ನ ಟ್ವಿಟರ್‌ನಲ್ಲಿ 'ತನ್ನ ತಲೆ ಉಳಿಸಿಕೊಳ್ಳಲಾಗದ ಗಣಪತಿ ಭಕ್ತರ ತಲೆಯನ್ನು ಹೇಗೆ ಉಳಿಸುತ್ತಾನೆ' ಎಂದು ಟ್ವೀಟ್ ಮಾಡುವಂತಹ ಮೂರ್ಖತನವನ್ನು ತೋರಿಸುತ್ತಿರಲಿಲ್ಲ. ಭಕ್ತರೊಬ್ಬರು ಕೋರ್ಟ್ ಮೆಟ್ಟಿಲು ಹತ್ತಿದ ಬಳಿಕ ಕ್ಷಮೆ ಕೇಳಿದ್ದೇನೋ ಸರಿಯೇ. ಆದರೆ ಇಂತಹ ವಿವಾದಗಳಿಂದ ಈತನ ವೃತ್ತಿಬದುಕಿಗೆ ನಯಾಪೈಸೆಯ ಪ್ರಯೋಜನವೂ ಆಗಬೇಕಿಲ್ಲ ಎನ್ನುವುದು ವಿಪರ್ಯಾಸ. ತನಗಿಷ್ಟ ಬಂದಂತೆ ತಿಕ್ಕಲುತನದಿಂದ ರೀಲ್ ಸುತ್ತುವ ಬದಲು, ಒಂದೇ ಕಥೆಯನ್ನು ಇಪ್ಪತ್ತೈದು ಕೋನಗಳಿಂದ ಮತ್ತೆ ಮತ್ತೆ ಸುತ್ತುವ ಬದಲು, ಆರ್‌ಜಿವಿ ಶಿಸ್ತಿನಿಂದ ಕುಳಿತು ಚಿತ್ರ ಮಾಡಿದರೆ, ಇವತ್ತಿಗೂ ಈತನಷ್ಟು ಬುದ್ಧಿವಂತ ನಿರ್ದೇಶಕರು ಇಲ್ಲ ಎನ್ನಬಹುದು. ಆದರೆ ಅದು ಸಾಧ್ಯವೆ? ಈತ ಬರೆದ ಆತ್ಮಕಥೆ 'ನಾ ಇಷ್ಟಂ' ಓದಿದರೆ, ಈ ಆರ್‌ಜಿವಿ ಅಷ್ಟು ಸುಲಭವಾಗಿ ಉದ್ಧಾರ ಆಗುವಂತೆ ಕಾಣುತ್ತಿಲ್ಲ!



## ಲಿ ನಾ ವಿದಾಯ

ಚಿಕ್ಕಂದಿನಲ್ಲಿ ಬ್ಯಾಡ್ಮಿಂಟನ್ ತಾರೆಯಾಗಬೇಕೆಂದು ಹೊರಟಾಕೆ ಲಿ ನಾ. ಆದರೆ ಈಕೆ ರಾಕೆಟ್ ಬೀಸುವ ರಭಸವನ್ನು ಕಂಡ ಕೋಚ್, ನೀನು ಟೆನಿಸ್ ಆಡುವುದೇ ವಾಸಿ ಎಂದ. ಅದರಂತೆ ಟೆನಿಸ್ ಅಂಗಣಕ್ಕಿಳಿದ ಲಿ ನಾ, ಚೀನಾ ಕಂಡ ಅತಿ ದೊಡ್ಡ ಕ್ರೀಡಾ ತಾರೆ. ಬೇರೆಲ್ಲ ಕ್ರೀಡೆಗಳಲ್ಲಿ ಚೀನೀಯರು ಈವರೆಗೆ ನೂರಾರು ಪದಕಗಳನ್ನು ಗೆದ್ದಿದ್ದರೂ, ಟೆನಿಸ್ ಆಟಗಾರ್ತಿ ಲಿ ನಾ ದೇಶಕ್ಕೆ ತಂದುಕೊಟ್ಟಷ್ಟು ಕೀರ್ತಿಯನ್ನು ಬೇರೆ ಯಾರೂ ತಂದುಕೊಟ್ಟಿಲ್ಲ ಎನ್ನುವುದು ನಿಜ. 2011 ರಲ್ಲಿ ಫ್ರೆಂಚ್ ಓಪನ್ ಮತ್ತು 2014ರಲ್ಲಿ ಆಸ್ಟ್ರೇಲಿಯನ್ ಓಪನ್ ಪ್ರಶಸ್ತಿಗಳನ್ನು ಗೆದ್ದು, ಒಂದು ಹಂತದಲ್ಲಿ ವಿಶ್ವ ರಾಂಕಿಂಗ್‌ನಲ್ಲಿ 2ನೇ ಸ್ಥಾನಕ್ಕೆ ಏರಿದ್ದು ಸಾಮಾನ್ಯ ಸಾಧನೆಯಲ್ಲ. ಈ ದಾಖಲೆ ಮಾಡಿದ ಏಷ್ಯಾದ ಮೊದಲಿಗಳು ಲಿ ನಾ.

32ರ ಹರೆಯ ನಿವೃತ್ತಿಯ ವಯಸ್ಸೇನಲ್ಲ. ಆದರೆ ಬಲ ಮೊಣಕಾಲಿಗೆ ಮೂರು ಮತ್ತು ಎಡ ಮೊಣಕಾಲಿಗೆ ಒಂದು ಶಸ್ತ್ರ ಚಿಕಿತ್ಸೆಯ ಬಳಿಕ ತನ್ನ ಸಾಮರ್ಥ್ಯದ ಅರಿವು ಲಿ ನಾ ಳಿಗೆ ಸ್ಪಷ್ಟವಾದಂತಿದೆ. ಅದಕ್ಕೆಂದೇ ಸದ್ದಿಲ್ಲದೆ ನಿವೃತ್ತಿ ಘೋಷಿಸಿದ್ದಾಳೆ. ಪ್ರತಿ ಸಲ ಆಟವಾಡುವಾಗಲೂ ಹತ್ತಾರು ಇಂಜೆಕ್ಷನ್‌ಗಳನ್ನು ಚುಚ್ಚಿಸಿಕೊಂಡು ಆಟವಾಡುವುದು ಕಷ್ಟವೇ ಸರಿ.

ಚೀನಾದಲ್ಲಿ ಕ್ರೀಡಾಪಟುಗಳಿಗೆ ಸ್ವತಂತ್ರ ವ್ಯಕ್ತಿತ್ವ ಇರಬೇಕು ಎನ್ನುವುದನ್ನು ಸಮರ್ಥಿಸಿದಾಕೆ ಲಿ ನಾ. 2008ರವರೆಗೆ ಸರ್ಕಾರದ ಇಚ್ಛೆಯಂತೆಯೇ ಆಡುತ್ತಿದ್ದ ಈಕೆ, ಆ ಬಳಿಕ ಸ್ವತಂತ್ರ ಕೋಚ್ ಪಡೆದಳು. ಅಲ್ಲಿಯರೆಗೆ ಈಕೆ ಗೆದ್ದ ಹಣದಲ್ಲಿ ಶೇಕಡಾ 65ರಷ್ಟು ಸರ್ಕಾರಕ್ಕೇ ಹೋಗುತ್ತಿತ್ತು. ಆಕೆ ಸ್ವತಂತ್ರಗೊಂಡ ಬಳಿಕ ಅದು ಶೇಕಡಾ 12ಕ್ಕೆ ಇಳಿಯಿತು. ಕಾಲು ನೋವು–ಬಾವುಗಳಿಂದ ಬಳಲಿದ ಈಕೆ ಎಷ್ಟೋ ಟೂರ್ನಿಗಳಲ್ಲಿ ಮೊದಲ ಅಥವಾ ಎರಡನೇ ರೌಂಡ್‌ಗಳಲ್ಲೇ ಸೋಲಪ್ಪಿ ಹೊರಬಿದ್ದದ್ದಿದೆ. ಆದರೆ ಗಂಡ ಜಿಯಾಂಗ್ ಶಾನ್‌ನ ಬೆಂಬಲದಿಂದ ಈ ಮಟ್ಟಕ್ಕೆ ಬೆಳೆದದ್ದು ಈಕೆಯ ದೃಢಚಿತ್ತಕ್ಕೆ ಸಾಕ್ಷಿ. ವೃತ್ತಿಜೀವನದಲ್ಲಿ ಒಟ್ಟು 16.7 ದಶಲಕ್ಷ ಡಾಲರ್ ಹಣವನ್ನು ಗೆದ್ದುಕೊಂಡಿರುವ ಲಿ ನಾ, ಚೀನಾ ಕಂಡ ಅತ್ಯಂತ ಖ್ಯಾತಿವೆತ್ತ ಜಾಹೀರಾತು ಮಾಡೆಲ್ ಕೂಡಾ ಹೌದು. ನಿವೃತ್ತಿಯ ಬಳಿಕ ಟೆನಿಸ್ ಅಕಾಡೆಮಿ ಸ್ಥಾಪಿಸುವ ಕನಸು ಈಕೆಯದ್ದು. ಮ್ಯಾಂಡರಿನ್ ಭಾಷೆಯಲ್ಲಿದ್ದ ಈಕೆಯ ಆತ್ಮಕಥೆ 'ಮೈ ಲೈಫ್' ಇತ್ತೀಚೆಗೆ ಇಂಗ್ಲಿಷಿಗೂ ಅನುವಾದವಾಗಿದೆ. ■

Printed and Published by S.V. Srinivasan on behalf of The Printers (Mysore) Private Ltd. Printed at M/s Geetanjali Graphics, # B-71, New No. 84, KSSIDC, Indl Estate, 6th Block, Rajajinagar, Bengaluru- 560010 and published from The Printers (Mysore) Private Ltd., Plot Nos. 7 to12, Kumbalgodu Industrial Area, II Phase, Bangalore - 560074. Editor: K.N. TILAK KUMAR.
Editorial Office: 75, M.G Road, Bangalore-560 001 E-mail:editorsu@sudha.co.in. Phone: 2588 0000, Fax: 25880618, Editorial:25880619,
Circ:1800-425-8009, Advt: 1800-425-8008, ©All rights reserved. Reproduction in whole or in part without permission is prohibited.
RNI No 7891/65